# KHANNUR VIDYANIKETHAN SCHOOL, RANEBENNUR

## MID TERM EXAMINATION OCTOBER 2020

**Grade – VII** **Subject – KANNADA** **Marks – 40**

---

# (USE KANNADA HW NOTEBOOK TO ANSWER)

### ವಿಭಾಗ–ಎ (ವಾಚನ ಮತ್ತುಗ್ರಹಿಕಾ ಕೌಶಲ) :6ಅಂಕಗಳು

**1. ಕೆಳಗಿನ ಗದ್ಯಭಾಗಓದಿಕೊಂಡುಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

. ಮಾನವ ಬದುಕಲು ಗಾಳಿ, ಬೆಳಕು, ನೀರುಅತಿಅಗತ್ಯವಾದರೂಕೂಡ ಅವುಗಳನ್ನು ಕಾಪಾಡಿಕೊಳ್ಳುವುದೂ ಕೂಡಅಷ್ಟೇಅಗತ್ಯವಾಗಿದೆ.ಅನಗತ್ಯವಾಗಿ ಮಾನವ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾನೆ. ಅವುಗಳ ಕೊಳಕನ್ನು ನದಿಗೋ, ಕೆರೆಗೋ, ಹಳ್ಳಕ್ಕೋ ಹರಿಬಿಡುತ್ತಾನೆ. ಕಾರ್ಖಾನೆಗಳ ಹೊಗೆಯಿಂದ ವಾಯುಮಾಲಿನ್ಯಉಂಟಾದರೆ, ಅದರ ಕೊಳಚೆ ನೀರು ನದಿಯನ್ನು ಸೇರಿ ಜಲಮಾಲಿನ್ಯವುಂಟಾಗುತ್ತಿದೆ.ನೀರನ್ನು ಭೂಮಿಯ ಮೇಲಿನ ಅಮೃತ, ಜೀವಜಲ ಎಂದುಕರೆಯುತ್ತಾರೆ.ಆದರೆಅದನ್ನು ನಾವು ಅಗತ್ಯಕ್ಕಿಂತ ಹೆಚ್ಚು ಬಳಸುತ್ತೇವೆ. ಕೆಲವೊಮ್ಮೆ ನಲ್ಲಿಗಳನ್ನು ಹಾಗೆಯೇತೆರೆದಿಟ್ಟು ಹೋಗಿಬಿಡುತ್ತೇವೆ. ಇದರಿಂದಅಪಾರ ನೀರು ನಷ್ಟವಾಗುತ್ತದೆ.ಕಾಡಿನ ನಾಶದಿಂದ ಈಗೀಗ ಮಳೆಯೂ ಕಡಿಮೆಯಾಗುತ್ತಿದೆ.ಇದೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ಹನಿ ನೀರಿಗೂ ಪರದಾಡಬೇಕಾಗುತ್ತದೆ.ಆದ್ದರಿಂದಒಂದೊಂದು ಹನಿ ನೀರನ್ನೂಕಾಪಾಡಬೇಕು.ನೀರನ್ನು ವ್ಯರ್ಥವಾಗಿ ಪೋಲು ಮಾಡಬಾರದು.ಜಲಸಂರಕ್ಷಣೆ ಪ್ರತಿಯೊಬ್ಬರಆದ್ಯಕರ್ತವ್ಯಎಂಬುದನ್ನು ಅರಿತುಕೊಳ್ಳಬೇಕು. ನೀರು ಪೋಲಾಗುವುದನ್ನುತಡೆಗಟ್ಟಲು ಪ್ರತಿಯೊಬ್ಬರೂ ಮುಂದಾದರೆ ನಮ್ಮ ನೀರಿನ ಸಮಸ್ಯೆಯನ್ನು ನಾವು ಬಗೆಹರಿಸಿಕೊಳ್ಳಬಹುದು. ಹಾಗಾಗಿ ಎಲ್ಲರೂ ಆ ದಿಸೆಯಲ್ಲಿ ಪ್ರಯತ್ನಶೀಲರಾಗಬೇಕು.

**ಪ್ರಶ್ನೆಗಳು:**

1. ಅಂತರ್ಜಲ ಕಡಿಮೆಯಾಗಲುಕಾರಣವೇನು? 1
2. ಮಾನವ ಬದುಕಿಗೆಯಾವುದುಅಗತ್ಯವಾಗಿದೆ ? 1
3. ಜಲಮಾಲಿನ್ಯ ಮತ್ತು ವಾಯುಮಾಲಿನ್ಯಗಳಿಗೆ ಕಾರಣವೇನು? 2
4. ಜಲಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಬಗೆ ಹೇಗೆ ? 2

### ವಿಭಾಗ –ಬಿ (ಬರವಣಿಗೆಯ ಕೌಶಲ) 4: ಅಂಕಗಳು

**2. ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ /ಗೆಳತಿಗೆ ಒಂದು ಪತ್ರ ಬರೆಯಿರಿ.** 4

### ವಿಭಾಗ – ಸಿ (ಅನ್ವಯಿಕ ವ್ಯಾಕರಣ) :10ಅಂಕಗಳು

**3. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆಉತ್ತರ ಬರೆಯಿರಿ:**

1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ: 2
   1. ದಾಕ್ಷಿಣ್ಯ 2. ಪಿತೃ
2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: 2
   1. ಸ್ವರ್ಗ 2. ದೂರ
3. ಈ ಪದವನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ: 2
   1. ಚುಚ್ಚುಮಾತು 2. ಆತಿಥ್ಯ
4. ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: 2
   1. ಚಳಿಗಾಲ 2. ಗುರುವನ್ನು
5. ಈ ಪದಗಳ ವಚನ ಬದಲಿಸಿ ಬರೆಯಿರಿ: 2
   1. ಬಣ್ಣ 2.ರಥಗಳು

P.T.O…

## ವಿಭಾಗ – ಡಿ (ಪಠ್ಯಗಳ ಅಧ್ಯಯನ)

**4. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದಉತ್ತರವನ್ನು ಆರಿಸಿ ಬರೆಯಿರಿ:10**

1. ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ?
   ಎ) ಎರಡು ಬಿ) ಮೂರು ಸಿ) ನಾಲ್ಕು ಡಿ) ಐದು
2. ಶಲ್ಯನಿಗೆಆದರಾತಿಥ್ಯದಏರ್ಪಾಡು ಮಾಡಿದವರುಯಾರು?
   ಎ) ಧರ್ಮರಾಯ ಬಿ) ದುರ್ಯೋಧನ ಸಿ) ಶಕುನಿ ಡಿ) ಕೃಷ್ಣ
3. ಶಲ್ಯನತಂಗಿಯಾರು?
   ಎ) ಮಾದ್ರಿ ಬಿ) ದ್ರೌಪದಿ ಸಿ) ಕುಂತಿ ಡಿ) ಗಾಂಧಾರಿ
4. ಹಾಲಪ್ಪನ ಕಾಲನ್ನು ಏನು ಕಚ್ಚಿತು?
   ಎ) ಚೇಳು ಬಿ) ಹುಲಿ ಸಿ) ಹಾವು ಡಿ) ಝರಿ
5. ಮಾಂಡವಿ ಟೀಚರ್‌ಯಾರನ್ನು ಪರಿಚಯಿಸಿದರು?
   ಎ) ಸೀನಸೆಟ್ಟರನ್ನು ಬಿ) ತುಂಗಾಳನ್ನು ಸಿ) ವೈದ್ಯರನ್ನು ಡಿ) ಮಕ್ಕಳನ್ನು
6. ಕಡಲುಕ್ಕುವಚೇತನಎಲ್ಲಿಕಾಣಬರುತ್ತದೆ?
   ಎ)ಎಲ್ಲಾ ಸ್ಥಳದಲ್ಲಿ ಬಿ) ಮನೆಯಲ್ಲಿ ಸಿ) ನದಿಯಲ್ಲಿ ಡಿ) ರೆಂಬೆ ಕೊಂಬೆ ಚಿಗುರುವಲ್ಲಿ
7. ಯುವತಿಕರೆದುಕೊಂಡು ಹೋಗುತ್ತೇನೆಎಂದಾಗ ಚುಕ್ಕಿ ಏನು ಮಾಡಿತು?
   ಎ) ಸುಮ್ಮನೆ ಹೋಯಿತು ಬಿ) ಯುವಕನ ಮನೆಯೊಳಗೆ ಅವಿತುಕೊಂಡಿತು
   ಸಿ) ಬರುವುದಿಲ್ಲವೆಂದಿತು ಡಿ) ಓಡಿ ಹೋಯಿತು
8. ಜಿಂಕೆಯಕುತ್ತಿಗೆಯಲ್ಲಿಏನಿತ್ತು?
   ಎ) ಸರ ಬಿ) ಗೆಜ್ಜೆ ಸಿ) ಹಗ್ಗ ಡಿ) ಸರಪಳಿ
9. ಪುಟ್ಟಜ್ಜಿಯ ಬಳಿ ಹುಡುಗಯಾವಕತೆ ಹೇಳಬೇಕೆಂದು ಕೇಳಿದನು?
   ಎ) ಹಾಡ್ಗತೆ ಬಿ) ಸಣ್ಣಕತೆ ಸಿ) ದೇವರಕತೆ ಡಿ) ಪೌರಾಣಿಕಕತೆ
10. ಅದುಇದುಎಣಿಸದಿರುವುದುಯಾವುದು?
   ಎ) ಮನುಷ್ಯರು ಬಿ) ಗಿಡಮರ ಸಿ) ಮನೆಗಳು ಡಿ) ಪುಸ್ತಕ

**5. ಕೊಟ್ಟಿರುವ ಪ್ರಶ್ನೆಗೆಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಶಲ್ಯನಿಗೆದಾರಿಯುದ್ದಕ್ಕೂದುರ್ಯೋಧನ ಮಾಡಿದ ವ್ಯವಸ್ಥೆಗಳೇನು? 2
2. ಸೀನಸೆಟ್ಟರ ವೇಷ ಹೇಗಿತ್ತು? 2
3. ಹಳ್ಳ ಹರಿದುಊರಜನರನ್ನು ಏನು ಮಾಡಿದೆ? 2

**6. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?**

1. "ನೀವು ಮತ್ತು ನಿಮ್ಮ ಸೇನೆ ನಮ್ಮ ಪರವಾಗಿ ಹೋರಾಡಬೇಕು" 2
2. "ಮುಂಚಿ ಸಸಿಗಳನ್ನು ಕೀಳಾಣ" 2

*****

**SUBMIT THIS ANSWER NOTE BOOK TO GRADE BUILDING ON THE LAST DAY OF YOUR MID TERM EXAM**